# ‘ನಿರ್ದೇಶಕರು ನಾಪತ್ತೆಯಾಗಿದ್ದಾರೆ’

ಕಂಠೀರವ ಸ್ಟುಡಿಯೊ ಆವರಣ. ಮುಹೂರ್ತಕ್ಕೆ ಅರ್ಚಕರು ಅಣಿಯಾಗುತ್ತಿದ್ದರು. ಕೊಂಚ ಅಲ್ಲಾಡುತ್ತಿದ್ದ ಕುರ್ಚಿಯ ಒಂದು ಕಾಲಿಗೆ ಚಪ್ಪಟೆ ಕಲ್ಲೊಂದನ್ನು ಇಟ್ಟು, ಅದು ಅಲುಗಾಡದಂತೆ ಮಾಡಿ ಹಿರಿಯ ನಟ ಆಸೀನರಾದರು. ನಿತ್ಯವೂ ಬೆಳಿಗ್ಗೆ ತಪ್ಪದೇ ಸುದ್ದಿಪತ್ರಿಕೆಗಳನ್ನು ಕೂಲಂಕಷವಾಗಿ ಓದುವುದು ಅವರಿಗೆ ಅಭ್ಯಾಸ. ಅಭಿನಯಲೋಕದಲ್ಲಿ ಅಷ್ಟೇ ಅಲ್ಲದೆ ರಾಜಕೀಯ ಮೊಗಸಾಲೆಗಳನ್ನೂ ಕಂಡಿದ್ದರಿಂದ ಅವರಿಗೆ ಹಲವು ಕ್ಷೇತ್ರಗಳ ಕುರಿತು ಒಳನೋಟ. ಪ್ರಚಲಿತ ವಿದ್ಯಮಾನಗಳ ಕುರಿತು ಗಂಟೆಗಟ್ಟಲೆ ಅರ್ಥಪೂರ್ಣ ಚರ್ಚೆಯಲ್ಲಿ ತೊಡಗಬಲ್ಲಷ್ಟು ಜ್ಞಾನ. ಒಂದು ಕಾಲದಲ್ಲಿ ಜನಪ್ರಿಯ ನಾಯಕರಾಗಿದ್ದವರು ಎಂದಮೇಲೆ ವರ್ಚಸ್ಸಿಗೂ ಕಡಿಮೆ ಇಲ್ಲ.

ಇಂಥ ಹಿನ್ನೆಲೆಯ ನಟ ಆ ಕಾಲಘಟ್ಟದಲ್ಲಿ– ಐದಾರು ವರ್ಷದ ಹಿಂದೆ– ಪೋಷಕ ಪಾತ್ರಗಳಲ್ಲಿ ವ್ಯಾಪಕವಾಗಿ ನಟಿಸುತ್ತಿದ್ದರು. ಆ ದಿನ ಮುಹೂರ್ತದ ಭರಾಟೆಯ ಮಧ್ಯೆಯೂ ಅವರ ಕೈಲಿ ದಿನಪತ್ರಿಕೆ. ಕ್ರೀಡಾಪುಟಗಳನ್ನು ಶ್ರದ್ಧೆಯಿಂದ ಓದುತ್ತಿದ್ದ ಅವರು, ಅದರ ನಡುವೆಯೇ ಸರಿದಾಡುತ್ತಿದ್ದವರಿಗೆ ‘ಹಾಯ್’, ‘ನಮಸ್ಕಾರ’ ಹೇಳುತ್ತಿದ್ದರು. ‘ನಿರ್ದೇಶಕರು ಯಾರು’ ಎಂದು ಎದುರಿಗಿದ್ದ ಸ್ನೇಹಿತರೊಬ್ಬರನ್ನು ಅವರು ಕೇಳಿದಾಗ, ಅಲ್ಲಿದ್ದ ಅನೇಕರಿಗೆ ಆಶ್ಚರ್ಯ.

ಆ ಚಿತ್ರತಂಡದ ನಾಲ್ಕೈದು ಮಂದಿ ನಟನ ಮನೆಗೆ ಹೋಗಿ ಅವರಿಗೆ ಪಾತ್ರ ಮಾಡುವಂತೆ ಕೇಳಿಕೊಂಡು ತಿಂಗಳಾಗಿತ್ತು. ಅವರಲ್ಲಿ ನಿರ್ದೇಶಕ ಯಾರು ಎಂದು ವಯೋಸಹಜವಾಗಿಯೇ ಅವರು ಮರೆತಿರಬೇಕು ಎಂದು ಅಲ್ಲಿದ್ದವರು ಎಣಿಸಿದರು. ಆದರೆ ವಿಷಯ ಅದಾಗಿರಲಿಲ್ಲ. ‘ಇತ್ತೀಚೆಗೆ ನನಗೆ ಎಷ್ಟೋ ಚಿತ್ರಗಳ ನಿರ್ದೇಶಕರೇ ಗೊತ್ತಿರುವುದಿಲ್ಲ. ಒಂದೊಂದು ದಿನ ಒಬ್ಬೊಬ್ಬರು ಡೈಲಾಗ್ ಶೀಟ್‌ಗಳನ್ನು ಕೊಡುತ್ತಾರೆ. ಯಾರ್‍ಯಾರೋ ಮಾನಿಟರ್ ಮುಂದೆ ಕುಳಿತುಕೊಳ್ಳುತ್ತಾರೆ. ಯಾರು ಅಸಿಸ್ಟೆಂಟ್, ಯಾರು ಅಸೋಸಿಯೇಟ್, ಯಾರು ನಿರ್ದೇಶಕ ಎಂಬುದು ಗೊಂದಲ. ಎಲ್ಲರೂ ಹೀಗಿರುವುದಿಲ್ಲ. ಈ ಚಿತ್ರದ ನಿರ್ದೇಶಕ ಗೊತ್ತಿಲ್ಲ ಎಂದು ಹೇಳಿದ್ದೂ ಅದೇ ಕಾರಣಕ್ಕೆ. ನಾನಿಲ್ಲಿಗೆ ಬಂದು ನಿಮಿಷಗಳು ಕಳೆಯುತ್ತಾ ಬಂದರೂ ಅವರು ಪತ್ತೆಯೇ ಇಲ್ಲ. ಅದಕ್ಕೇ ಹಾಗೆಂದೆ. ನಿರ್ದೇಶಕರು ನಾಪತ್ತೆಯಾಗಿದ್ದಾರೆ ಎಂದು ಸೆನ್ಸೇಷನಲ್ ಸುದ್ದಿ ಬರೆಯಬಹುದು’ ಎಂದು ಅವರು ಚಟಾಕಿ ಹಾರಿಸಿದರು.

‘ನಿರ್ದೇಶಕರು ನಾಪತ್ತೆಯಾಗಿದ್ದಾರೆ’ ಎಂಬ ಅವರ ಮಾತಿನಲ್ಲಿ ದೊಡ್ಡ ಕಳಕಳಿ ಇತ್ತು. ಶ್ರದ್ಧೆ, ಶಿಸ್ತು, ಹೋಂವರ್ಕ್ ಇವ್ಯಾವುದೂ ಇಲ್ಲದ ನಿರ್ದೇಶಕರನ್ನು ಕಂಡರೆ ಅವರಿಗೆ ಆಗುತ್ತಿರಲಿಲ್ಲ. ಆದರೂ ಸಂಭಾವನೆ ಸಿಗುತ್ತದೆಂದು ಬಣ್ಣ ಹಚ್ಚುತ್ತಿರುವುದಾಗಿ ಅವರು ನಿಸ್ಸಂಕೋಚವಾಗಿ ಹೇಳಿಕೊಂಡರು. ಶ್ರದ್ಧೆಗೆ ಉದಾಹರಣೆಯಾಗಿ ದಿನೇಶ್ ಬಾಬು ತರಹದ ನಿರ್ದೇಶಕರ ಹೆಸರು ಹೇಳಿದರು. ತಮ್ಮ ಹಳೆಯ ದಿನಗಳಲ್ಲಿ ಸೂರ್ಯ ಮುಳುಗುವ ಮೊದಲೇ ಪ್ಯಾಕಪ್ ಆಗುತ್ತಿದ್ದ ಚಿತ್ರಗಳ ಸುತ್ತಲೂ ಅವರ ಮಾತು ಗಿರಕಿ ಹೊಡೆಯಿತು. ‘ಸಂಜೆ ಧ್ಯಾನದ ಹೊತ್ತು’ ಎಂಬ ಅವರ ಮಾತಿನ ಅರ್ಥವೂ ಅನೇಕರಿಗೆ ಗೊತ್ತಿದೆ.

ಮಗಳ ಜೊತೆ ಕ್ರಿಕೆಟ್ ನೋಡುತ್ತಾ ಬಾಜಿ ಕಟ್ಟಿ ಸೋಲುವುದು, ಹಳೆಯ ಚಿತ್ರಗಳಲ್ಲಿ ತಾವು ಮಾಡಿದ ತಪ್ಪುಗಳನ್ನು ನೆನಪಿಸಿಕೊಳ್ಳುತ್ತಾ ಜೋಕ್ ಮಾಡುವುದು ಹಾಗೂ ತಾವು ನಟಿಸಿದ ಇತ್ತೀಚಿನ ಚಿತ್ರಗಳನ್ನು ನೋಡದೇ ಇರುವುದು ಅವರ ಹವ್ಯಾಸ!

– ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68